ರೇಟ್ ಕಾಂಟ್ಯಾಕ್ಟ್ ಮೂಲಕ ಪ್ರತಿವರ್ಷ ಔಷಧಿ ಖರೀದಿ.

399 - ಡಾ||ಎ.ಬಿ. ಮಾಲಕ ರೆಡ್ಡಿ (ಯಾದಗಿರಿ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸರ್ಕಾರದವರು ಪ್ರತಿ ವರ್ಷ ಔಷಧಿಗಳನ್ನು ಖರೀದಿಸಲು ರೇಟ್ ಕಾಂಟ್ರಾಕ್ಟರನ್ನು ಕರೆಯುತ್ತಾರೆಯೆ?

ಆ) ಹಾಗಿದ್ದರೆ, 1991ನೇ ಸಾಲಿನಿಂದ ಜೂನ್ 1995 ರವರೆಗೆ ಔಷಧಿಗಳ ಖರೀದಿಸುವ ಬಗ್ಗೆ ಔಷಧಿಗಳ ತಯಾರಕರು ಹಾಗೂ ಮಾರಾಟಗಾರರಿಂದ ರೇಟ್ ಕಾಂಟ್ರಾಕ್ಟರನ್ನು ಕರೆದಿರುವ ಬಗ್ಗೆ ಸರ್ಕಾರದವರು ಮಾಹಿತಿಯನ್ನು ಒದಗಿಸುವರೇ?

ಶ್ರೀ ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಇಲ್ಲ.

ಆ) ದರಗುತ್ತಿಗೆಯನ್ನು ಒಮ್ಮೆ ಒಪ್ಪಿದ ನಂತರ ಸಾಮಾನ್ಯವಾಗಿ 18 ತಿಂಗಳ ಅವಧಿಯವರೆಗೆ ಜಾರಿಯಲ್ಲಿರುತ್ತದೆ. ಹೊಸ ದರಗುತ್ತಿಗೆ ನಿಶ್ಚಯವಾಗದಿದ್ದಲ್ಲಿ ಹಳೆಯ ದರಗುತ್ತಿಗೆ ಅವಧಿಯನ್ನು ವಿಸ್ತರಿಸುವ ಅವಕಾಶ ಮಾಡಲಾಗಿದೆ. ಆದ್ದರಿಂದ ಪ್ರತಿ ವರ್ಷವು ದರ ಗುತ್ತಿಗೆಯನ್ನು ಕರೆಯಾಗುವುದಿಲ್ಲ.

ಇ) 1991-92ನೇ ಸಾಲಿನ ದರಗುತ್ತಿಗೆಯನ್ನು ದಿನಾಂಕ 23-4-1992ರಿಂದ ಜಾರಿಯಲ್ಲಿದ್ದು, ಅದನ್ನು ಹೊಸ ದರಗುತ್ತಿಗೆ ನಿಶ್ಚಯವಾಗದಿದ್ದ ಕಾರಣ 1991-92ನೇ ದರಗುತ್ತಿಗೆಯನ್ನು 31-12-1994 ರವರೆಗೆ ವಿಸ್ತರಿಸಲಾಯಿತು. ಹೊಸ ದರ ಗುತ್ತಿಗೆಯನ್ನು ನಿಶ್ಚಯಿಸುವುದು ಇನ್ನೂ ಸರ್ಕಾರದ ಪರಿಶೀಲನೆಯಲ್ಲಿದೆ.

ಹಾಸನದಲ್ಲಿ ಗ್ಲೂಕೋಸ್ ಘಟಕ ನಿರ್ಮಾಣದ ಪ್ರಗತಿ.

401 - ಶ್ರೀ ಬಿ. ಶಿವರಾಮು (ಗಂಡಸಿ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನ ಜಿಲ್ಲೆಯ ಗ್ಲೂಕೋಸ್ ಘಟಕದ ನಿರ್ಮಾಣದ ಪ್ರಗತಿ ಯಾವ ಹಂತದಲ್ಲಿದೆ?

ಆ) 1. ಇಲ್ಲಿಯವರೆಗೆ ಖರ್ಚು ಮಾಡಿರುವ ಹಣವೆಷ್ಟು?

2. ಯಾವ ಯಾವ ಕೆಲಸಕ್ಕೆ ಎಷ್ಟೆಷ್ಟು ಹಣ ಖರ್ಚು ಮಾಡಿದೆ?

3. ಯೋಜನೆಯನ್ನು ಯಾವ ಉದ್ದೇಶದಿಂದ ಜಿಲ್ಲೆಗ ಮಂಜೂರಾತಿ ಮಾಡಿತ್ತು?

4. ಯೋಜನೆಯಿಂದ ಯಾವ ಯಾವ ಪದಾರ್ಥಗಳನ್ನು ಉತ್ಪಾದನೆ ಮಾಡಲು ಸಾಧ್ಯ ಮತ್ತು ತಗಲುವ ವೆಚ್ಚವೆಷ್ಟು?